# ಯಾರಿಗೆ ಯಾರುಂಟು ಎರವಿನ ಸಂಸಾರ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 482
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 153
3. Note: Lyrics given here are as per Ref. 1. Lyrics given in Ref. 2 are same as in Ref. 1.
4. **Note:** Singer has followed these lyrics.

ರಾಗ: ಬಿಲಹರಿ ತಾಳ: ಆದಿ

ಯಾರಿಗೆ ಯಾರುಂಟು ಎರವಿನ ಸಂಸಾರ
ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ || ಪ ||

ಬಾಯಾರಿತು ಎಂದು ಬಾವಿ ನೀರಿಗೆ ಪೋದೆ
ಬಾವಿಲಿ ಜಲ ಬತ್ತಿ ಬರಿದಾಯ್ತು ಹರಿಯೆ || ೧ ||

ಬಿಸಿಲು ಗಾಳಿಗಾಗಿ ಮರದ ನೆರಳಿಗೆ ಪೋದೆ
ಮರ ಬಗ್ಗಿ ಶಿರದ ಮೇಲೊರಗಿತು ಹರಿಯೆ || ೨ ||

ಅಡವಿಯೊಳ್ ಮನೆ ಮಾಡಿ ಗಿಡಕೆ ತೊಟ್ಟಿಲು ಕಟ್ಟಿ
ತೊಟ್ಟಿಲಿನ ಶಿಶು ಮಾಯವಾಯಿತು ಹರಿಯೆ || ೩ ||

ತಂದೆ ಶ್ರೀ ಪುರಂದರ ವಿಠಲ ನಾರಾಯಣ
ನಾ ಸಾಯೊ ಹೊತ್ತಿಗೆ ನೀ ಕಾಯೋ ಹರಿಯೆ || ೪ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹರಿದಾಸರ ವೈರಾಗ್ಯ ಈ ಪದದಲ್ಲಿ ವ್ಯಕ್ತವಾಗಿದೆ. ಸಂಸಾರವೆಂಬುದು ಸ್ಥಿರವಲ್ಲ; ಜೀವರ ಸ್ವರೂಪೋದ್ಧಾರಕ್ಕೂ ಅನುಕೂಲವಾಗಲಾರದು. ಸಂಸಾರದ ಸುಖಗಳನ್ನೇ ನಂಬಿಕೊಂಡಿರುವ ಮನುಷ್ಯರಿಗೆ ಒದಗುವ ಬವಣೆಯನ್ನು ಇಲ್ಲಿ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ.

ಯಾರಿಗೆ ಯಾರುಂಟು – 'ಋಣಾನುಬಂಧರೂಪೇಣ ಪತಿಪತ್ನಿಸುತಾಲಯಾಃ' ಎನ್ನುವ ಮಾತಿನ ಛಾಯೆ. ಹಿಂದೆ ಮಾಡಿದ ಕರ್ಮಕ್ಕೆ ಫಲವಾಗಿ ಈ ಜನ್ಮದ ನಂಟು, ಕುಟುಂಬ; ಕರ್ಮ ತೀರಿತೆಂದರೆ ನೆಂಟೂ ಹರಿಯುತ್ತದೆ, ಕುಟುಂಬ ಬಯಲಾಗುತ್ತದೆ. ಆದ್ದರಿಂದ ಇದು 'ಎರವಿನ ಸಂಸಾರ,' ಸಾಲ ತೀರಿಸಲು ಉಂಟಾದದ್ದು.

**Classification:** Keerthane
**Ankita:** sri purandara vittala
**Location:** NA
**Category:** Jeevana Darshana, Binnaha
**Sub-Category:** samsara, Krishna, niru, bayi, mara, koosu, kaadu, Narayana, marana,
**Pravachana:** NA
**Explanation:** NA